ಬೇಕಾಗಿರುವಂತಹ ಯಾಂತ್ರೀಕರಣವನ್ನು ಒದಗಿಸುವಂತಹ ಜವಾಬ್ದಾರಿ ಸರ್ಕಾರದಾಗಿದೆ. ಹಾಗಾಗಿ 202 item ಗಳನ್ನು ರೈತರಿಗೆ ಸಬ್ಸಿಡಿ ರೂಪದಲ್ಲಿ ಕೊಡುತ್ತಿದ್ದೇವೆ. ಯಾವುದೇ ಜಿಲ್ಲೆಯಿಂದ ಬೇಡಿಕೆ ಬಂದಂತಹ ಸಂದರ್ಭದಲ್ಲಿ ಅನುದಾನದ ಲಭ್ಯತೆಯನ್ನು ನೋಡಿ ಅವುಗಳನ್ನು ಕೊಡುವಂತಹ ವ್ಯವಸ್ಥೆಯನ್ನು ಮುಂದುವರೆಸುತ್ತೇವೆ. ಮುಂದೆ ಈ ರೀತಿಯ ತೊಂದರೆಗಳಾಗಬಾರದು. ರೈತರು ಸಬ್ಸಿಡಿ ಸಿಗುತ್ತದೆಂದು ಮಾರುಕಟ್ಟೆಯಲ್ಲಿ ತೆಗೆದುಕೊಂಡು ತೊಂದರೆಗೆ ಸಿಕ್ಕಿ ಹಾಕಿಕೊಳ್ಳುತ್ತಾರೆನ್ನುವ ದೃಷ್ಟಿಯಿಂದ ಇದಕ್ಕೆ streamline ಮಾಡುತ್ತಿದ್ದೇವೆ. ನಮ್ಮ ಅನುದಾನ ಇರುವಷ್ಟು ಮಂಜೂರಾತಿಕೊಟ್ಟು, ರೈತರ ಸಹಾಯಕ್ಕೆ ನಮ್ಮ ಸರ್ಕಾರ ಹೋಗುತ್ತದೆಂದು ಹೇಳುತ್ತೇನೆ. ಇವತ್ತು ಏನಾಗುತ್ತಿದೆ. ಎಂದರೆ ರೈತರಿಗೆ ಅರ್ಜಿ ಕೊಟ್ಟರೆ ಮಂಜೂರು ಆಗಿದೆ. ಎಂದು ಕೆಳಗಿನ ಅಧಿಕಾರಿಗಳು ಹೇಳಿದರು. ಆದರೆ ನಮ್ಮಲ್ಲಿ ಅನುದಾನದ ಲಭ್ಯತೆ ಇಲ್ಲ. ಈ ತೊಂದರೆಯನ್ನು ಅನುಭವಿಸುವಂತಹ ಉದಾಹರಣೆಗಳು ನಮ್ಮ ಗಮನಕ್ಕೆ ಬಂದಾಗ ಇದಕ್ಕೆ ಪೂರ್ಣ ಪ್ರಮಾಣದ streamline ಮಾಡಿ, ಆ ಜಿಲ್ಲೆಗಳಲ್ಲಿ ರೈತರಿಗೆ equipment ಗಳನ್ನು ಕೊಡುವಂತಹ ವಿಚಾರದಲ್ಲಿ ನಾವು ಹಿಂದೆ ಬೀಳುವಂತಹ ಪ್ರಶ್ನೆ ಇಲ್ಲ. ರಾಜ್ಯ ಸರ್ಕಾರ ವಿಶೇಷವಾಗಿ ರೈತರ ಬಗ್ಗೆ ಕಾಳಜಿಯನ್ನು ಕಳೆದ ಮೂರು ವರ್ಷದಿಂದ ವಹಿಸಿಕೊಂಡು ಬಂದಿದ್ದೆ. ಮುಂದಿನ ದಿನಮಾನಗಳಲ್ಲೂ ರೈತರ ಬಗ್ಗೆ ಕಳಕಳಿ ಇಟ್ಟುಕೊಂಡು ಕೆಲಸ ಮಾಡುತ್ತೇನೆಂದು ತಮ್ಮ ಮುಖೇನ ಮಾನ್ಯ ಸದಸ್ಯರುಗಳಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು: ಈಗ ಲಿಖಿತ ಮುಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 03-02-2012ರ 4ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 88 ಪ್ರಶ್ನೆಗಳ ಪೈಕಿ 64 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಅನುಬಂಧ-3

ಶ್ರೀ ಸಯ್ಯದ್ ಯಾಸೀನ್: ಮಾನ್ಯ ಅಧ್ಯಕ್ಷರೆ, ತಾವು ರಾಯಚೂರಿನಲ್ಲಿ ಎಲ್ಲಾ MLA ಜೊತೆ ಸಭೆಯನ್ನು ಮಾಡಿದಿರಿ. What our Nadagowda has said is correct. Our district Raichur has been discriminated very badly. ನಮ್ಮ